(ಇಂದು ದಿನಾಂಕಃ 13-02-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ವಿ.ಎ.ಟಿ. ವಕೀಲರಿಂದಃ**

ನಾನು ಈ ಹಿಂದೆ ಹೇಳಿದಂತೆ ಅಂಗಡಿಯನ್ನು ಮಾರಿ ದಾವಾಸ್ತಿಯನ್ನು ಖರೀದಿ ಮಾಡಿದ್ದಲ್ಲಿ ನನ್ನ ಹೆಸರು ಕ್ರಯಪತ್ರದಲ್ಲಿ ಪ್ರತಿವಾದಿಯರ ಜೊತೆ ಇರುತ್ತಿತ್ತು ಎಂದರೆ ಸರಿ. ನಾನು ಯಾವುದೇ ಅಂಗಡಿ ಮಾರಾಟ ಮಾಡಿ ದಾವಾಸ್ತಿ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರು ಖರೀದಿ ಪತ್ರದಲ್ಲಿ ಬಂದ ಬಗ್ಗೆ ಗೊತ್ತಾದ ನಂತರ ನಾನು ಅದರ ಬಗ್ಗೆ ಎಲ್ಲಿಯೂ ಪ್ರಶ್ನಿಸಿಲ್ಲ ಹಾಗೂ ನನಗೂ ಅದರಲ್ಲಿ ಹಕ್ಕು ಇದೆ ಎಂದು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ನಾನು ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ